**ಸಿ.ಸಿ- 27/2016**
**ಪಿ. ಡಬ್ಲ್ಯೂ-39**

**ಇಂದು ದಿಃ 04-03-2021 ರಂದು ಸಾಕ್ಷಿ ಹಾಜರು ಇದ್ದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀಸವಾಲು ಆರೋಪಿ ಪರಃ ಶ್ರೀ ಆರ್.ಪಿ. ವಕೀಲರಿಂದಃ**

ಆರೋಪಿ ಮೂಲ ನಂದಿತಾವರೆ ಗ್ರಾಮದಲ್ಲಿದ್ದು ಅವರ ಕುಟುಂಬ ನಂದಿತಾವರೆಯಲ್ಲಿರುತ್ತದೆ ಎನ್ನುವುದು ನಿಜ. 600-1000 ಚೀಲ ಬೆಳೆಯುವಂತಹ ದೊಡ್ಡ ದೊಡ್ಡ ಹಿಡುವಳಿದಾರರು ಸಾಮಾನ್ಯವಾಗಿ ಅವರೇ ರೈಸ್ ಮಿಲ್ ಗೆ ತೆಗೆದುಕೊಂಡು ಹೋಗಿ ಅಕ್ಕಿಯನ್ನು ಮಾಡಿಸಿ ಮಾರಾಟ ಮಾಡುತ್ತಾರೆ ಎಂದರೆ ಸಾಕ್ಷಿ ಕೆಲವರು ಮಾಡುತ್ತಾರೆ ಕೆಲವರು ಮಾಡುವುದಿಲ್ಲ. ಆರೋಪಿಗೆ ನಂದಿತಾವರೆಯಲ್ಲಿ ಸ್ವಂತ ಮನೆ ಮತ್ತು ಜಮೀನು ಇರುತ್ತದೆ ಎನ್ನುವುದು ನಿಜ. ಆರೋಪಿಗೆ ಬತ್ತ ಮಾರಾಟ ಮಾಡಲು ಕೊಟ್ಟಿರುತ್ತೇನೆ ಎನ್ನುವುದಕ್ಕೆ ರಸೀದಿಯನ್ನು ಪೋಲೀಸರಿಗೆ ಕೊಟ್ಟಿರುತ್ತೇನೆ. ಆರೋಪಿಯಿಂದ ಬರವಣಿಗೆಯನ್ನು ಮಾಡಿಸಿಕೊಂಡಿಲ್ಲ. ದಿಃ23.06.2010 ರಲ್ಲಿ ನಾನು ಹೊಲದ ಹತ್ತಿರ ಬಂದಾಗ ಅಕ್ಕ ಪಕ್ಕದ ಜಮೀನಿನವರು ಮತ್ತು ಕುಣಿಬೆಳೆಕೆರೆ ಬೆಳೆಕೆರಪ್ಪ ಮತ್ತು ಇತರೆ ರೈತ ಸಂಘದ ಸದಸ್ಯರು ಹೇಳಿರುತ್ತಾರೆ. ಕುಣಿಬೆಳೆಕೆರೆ ಬೆಳೆಕೆರಪ್ಪ ಮತ್ತು ರೈತ ಸಂಘದ ಸದಸ್ಯರು ಹೇಳಿದ ನಂತರ ನಾನು ಪೋಲೀಸ್ ಠಾಣೆಗೆ ಹೋಗಿರುತ್ತೇನೆ. ಸಾಮಾನ್ಯವಾಗಿ ರೈತರು ತಮ್ಮ ಬೆಳೆಯನ್ನು ಎ.ಪಿ.ಎಂ.ಸಿ ಮೂಲಕ ಮಾರಾಟ ಮಾಡಬೇಕು ಎನ್ನುವುದು ನಿಜ. ಯಾವುದೇ ಒಬ್ಬ ಖರೀದಿದಾರ ಖರೀದಿ ಮಾಡಿದಾಗ ಖರೀದಿ ಮಾಡಿದ ರಸೀದಿಯನ್ನು ಕೊಡದೇ ಇದ್ದರೆ ಎ.ಪಿ.ಎಂ.ಸಿ ಗೆ ಪಿರ್ಯಾದಿಯನ್ನು ಕೊಡಬೇಕು ಎನ್ನುವುದು ಗೊತ್ತಿರುವುದಿಲ್ಲ. ಆರೋಪಿಯಿಂದ ಖರೀದಿ ರಸಿದಿಯನ್ನು ಪಡೆದುಕೊಂಡಿದ್ದೀರ ಎಂದರೆ ಸಾಕ್ಷಿ ಯಾರಿಗೆ ಕೊಟ್ಟಿಲ್ಲ ಎಂದು ಹೇಳುತ್ತಾರೆ. ಆರೋಪಿ ಖರೀದಿ ರಸೀದಿಯನ್ನು ಕೊಡದೇ ಇರುವುದಕ್ಕೆ ನಾನು ಎ.ಪಿ.ಎಂ.ಸಿ ಗೆ ಪಿರ್ಯಾದಿಯನ್ನು ಕೊಟ್ಟಿಲ್ಲ. ನಾನು ಭತ್ತವನ್ನು ಶ್ರೀನಿವಾಸ್ ರೈಸ್ ಮಿಲ್ ನಲ್ಲಿ ಅನ್ ಲೋಡ್ ಮಾಡಿರುತ್ತೇನೆ ಎಂದರೆ ಸಾಕ್ಷಿ ಆರೋಪಿಯ ಸಮಕ್ಷಮದಲ್ಲಿ ಅನ್ ಲೋಡ್ ಮಾಡಿರುತ್ತೇನೆ ಎಂದು ಹೇಳುತ್ತಾರೆ. ಆರೋಪಿಯ ಸಮಕ್ಷಮ ನಾನು ಭತ್ತ ಅನ್ ಲೋಡ್ ಮಾಡಿರುವ ಕುರಿತು ಪೋಲೀಸರಿಗೆ ದಾಖಲೆಯನ್ನು ಕೊಟ್ಟಿಲ್ಲ. ಶ್ರೀನಿವಾಸ್ ರೈಸ್ ಮಿಲ್ ನಾಗೇಶ್ವರ್ ರಾವ್ ಗೆ ಸಂಬಂಧಪಟ್ಟಿದ್ದು ಎಂದರೆ ಸಾಕ್ಷಿ ನಾವು ಅವರು ಪಾಲುದಾರರು ಎಂದು ಆರೋಪಿ ಹೇಳಿರುತ್ತಾನೆ ಎಂದು ಹೇಳುತ್ತಾರೆ. ಆರೋಪಿ ಶ್ರೀನಿವಾಸ್ ರೈಸ್ ಮಿಲ್ ನಲ್ಲಿ ಪಾಲುದಾರನಾಗಿ ಕುರಿತು ಯಾವುದೇ ದಾಖಲೆಗಳನ್ನು ನೋಡಿಲ್ಲ. ನಾನು ಆರೋಪಿಗೆ ಎಂದಿಗೂ ಭತ್ತವನ್ನು ಮಾರಾಟ ಮಾಡಿಲ್ಲ ಎಂದರೆ ಸರಿಯಲ್ಲ. ಆರೋಪಿ ನನಗೆ ಯಾವುದೇ ಹಣ ಕೊಡುವುದು ಬಾಕಿ ಇಲ್ಲ ನಾನು ರೈತ ಸಂಘದವರ ಮತ್ತು ಬೆಳೆಕೆರಪ್ಪನ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ 23 ರಲ್ಲಿ ನಾನು ಆರೋಪಿಗೆ ಭತ್ತ ಕೊಟ್ಟಿರುತ್ತೇನೆ ಎಂದು ನಮೂದು ಇರುವುದಿಲ್ಲ. ನನ್ನ ಹೆಸರಿಗೆ ಯಾವುದೇ ಜಮೀನು ಇರದೇ ಇದ್ದರೂ ಸಹ ಭತ್ತ ಬೆಳೆಯದೇ ಇದ್ದರೂ ಸಹ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾ . ದಲ್ಲಿ ಸಾಕ್ಷಿ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ  ಬೆರಳಚ್ಚು ಪಡಿಸಿದೆ).

ಓ ಹೇ ಕೆ ಸರಿ ಇದೆ.

ಸಹಿ/-
**ಹಿರಿಯ ಸಿವಿಲ್ ನ್ಯಾಯಾಧೀಶರು ,**
**ಹರಿಹರ.**